# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ:-123 ವಿಜಯನಗರ ಬೆಂಗಳೂರು.40**

ಸಂ:ಸ.ಅ/ವಾರ್ಡ್ ಸಮಿತಿ/ /ಸಭೆ- /20-21 ದಿ:04.05.2021.

## ವಿಜಯನಗರ ವಾರ್ಡ್ ಸಂಖ್ಯೆ:-123 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ವಿಷಯ:- ಮಾನ್ಯ ಆಯುಕ್ತರು ಬಿಬಿಎಂಪಿ ರವರು ಆದೇಶ ಸಂಖ್ಯೆ:ಆ12(5) ಪಿ.ಆರ್/35/2020-21 ದಿ:05.12.2020 ರವರ ಆದೇಶದಂತೆ ದಿ:04.05.2021 ರಂದು ವಾರ್ಡ್ ಸಂಖ್ಯೆ: 123 ರ ವಿಜಯನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಪದನಾಮ |
|---|---|---|
| 1. | ಶ್ರೀ. ಡಿ.ಕೆ ಬಾಬು | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ. |
| 2. | ಶ್ರೀಮತಿ. ಸಂಗೀತ ಆರ್ | ಸದಸ್ಯ ಕಾರ್ಯದರ್ಶಿ ವಾರ್ಡ್ ಸಂಖ್ಯೆ: 123. |
| 3. | ಶ್ರೀ. ರವಿವರ್ಮ | ಸ.ಕಾ.ನಿ.ಅ |
| 4. | ಶ್ರೀ. ಕುಮಾರ | ಕಂದಾಯ ಅಧಿಕಾರಿಗಳು. |
| 5. | ಶ್ರೀ. ಆದಿನಾರಾಯಣ | ಹಿರಿಯ ಆರೋಗ್ಯ ಪರಿವೀಕ್ಷಕರು |
| 6. | ಶ್ರೀಮತಿ. ವಿದ್ಯಾ ಹಿರೇಮಠ್ | ಎನ್.ಜಿ.ಓ. |
| 7. | ಶ್ರೀ ಹೇಮಂತ್ ಕುಮಾರ್ | ಸಹಾಯಕ ಆರೋಗ್ಯ ಪರಿವೀಕ್ಷಕರು. |
| 8. | ಶ್ರೀಮತಿ. ಸುಮಿತ್ರ ಬಿ. ಎಸ್ | Assessor |
| 9. | ಚಂದ್ರಶೇಕರ್ | Traffic police |

ದಿನಾಂಕ: 04.05.2021 ರಂದು, ಸಮಯ 03.00 ಗಂಟೆಗೆ, ಸಭೆಯು ಪ್ರಾರಂಭವಾಯಿತು ಸಭೆಯಲ್ಲಿ ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ.ಡಿ.ಕೆ ಬಾಬು ನೋಡಲ್ ಅಧಿಕಾರಿ ರವರು ಹಾಗೂ ಸಮಿತಿ ಸದಸ್ಯರು ಹಾಜರಾಗಿರುತ್ತಾರೆ.

ಶ್ರೀ.ಡಿ.ಕೆ.ಬಾಬು ರವರ ಅಧ್ಯಕ್ಷತೆಯಲ್ಲಿ ವಾರ್ಡಿನ ಕಾರ್ಯದರ್ಶಿಗಳಾದ ಶ್ರೀಮತಿ. ಸಂಗೀತ ಆರ್ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಮತ್ತು ಸಿಬ್ಬಂದಿ ವರ್ಗದವರನ್ನೂ ಸ್ವಾಗತಿಸಿದರು.

1. ನೋಡಲ್ ಅಧಿಕಾರಿ ರವರು MOH, SWD, SWM, ARO, AEE (Civil), Horticulture, SWD, BWSSB, BESCOM, Welfare Department, ಅಧಿಕಾರಿಗಳು ಹಿಂದೆ ನಡೆದ ಸಭೆಗಳಿಗೆ ಹಾಜರಿಲ್ಲದ ಕಾರಣ ಸಂಬಂಧಪಟ್ಟ ಅಧಿಕಾರಿಗಳ ಹೆಸರು, ಪದನಾಮ, ಇ-ಮೇಲ್ ಹಾಗೂ ದೂರವಾಣಿ ಸಂಖ್ಯೆಯನ್ನು ನೀಡಲು ಕಾರ್ಯದರ್ಶಿಗಳಿಗೆ ತಿಳಿಸಿದರು ಹಾಗೂ ಮುಂದಿನ ಸಭೆಗು ಸಹ ಹಾಜರಾಗದಿದ್ದರೆ ಅನುಪ ಸ್ಥಿತಿಯ ಬಗ್ಗೆ ಕೇಂದ್ರ ಕಛೇರಿಗೆ ಮಾಹಿತಿ ಸಲ್ಲಿಸಲು ಸೂಚಿಸಿದರು.
2. ಮುಂದಿನ ಸಭೆಯನ್ನು ಸಹ Virtual ZOOM Meeting ಮುಖಾಂತರವೆ ಕೈಗೊಳ್ಳುವುದಾಗಿ ಸಭೆಯ ಗಮನಕ್ಕೆ ತಂದು ತಯಾರಾಗುವಂತೆ ಕಾರ್ಯದರ್ಶಿಗಳಿಗೆ ತಿಳಿಸಿದರು.
3. ಕೋವಿಡ್-19 ರ ಕಾರ್ಯಚರಣೆಯಿಂದಾಗಿ Gang work ನಿಯೋಜಿಸಿರುವುದಿಲ್ಲ.
4. ಕೋವಿಡ್-19 ರ ಕಾರ್ಯಚರಣೆಯಿಂದಾಗಿ Compost Pit ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ.
5. Mask ಧರಿಸದ ಸಾರ್ವಜನಿಕರಿಗೆ ಒಟ್ಟಾರೆ ರೂ: 1700/- ದಂಢ ವಿಧಿಸಿರುವುದಾಗಿ ಸಭೆಯಲ್ಲಿ ಹಾಜರಿದ್ದ ಆರೋಗ್ಯ ಅಧಿಕಾರಿ ರವರು ಸಭೆಯ ಗಮನಕ್ಕೆ ತಂದರು.

6. ಜೆ.ಪಿ ಪಾರ್ಕ್, ವಿದ್ಯಾರಣ್ಯನಗರ ಪಾರ್ಕ್, ಸ್ಥಳಗಳಲ್ಲಿ CC T.V ಅವಶ್ಯಕವಿರುವುರಿಂದ ನೋಡಲ್ ಅಧಿಕಾರಿ ರವರು ಅಳವಡಿಸಲು ಕ್ರಮ ಕೈಗೊಳ್ಳುವಂತೆ ಕಾರ್ಯದರ್ಶಿ ಯವರಿಗೆ ಸೂಚಿಸಿದರು.
7. AG Peter ರವರ ಕಡತವನ್ನು ಜಂಟಿ ಆಯುಕ್ತರು ರವರ ಕಛೇರಿಗೆ ಅನುಮತಿಗಾಗಿ ಕಳುಹಿಸಿದ್ದು, ಅನುಮತಿ ದೊರೆತನಂತರ ಪಾಲಿಕೆ ವಶಕ್ಕೆ ಪಡೆಯಲಾಗುವುದೆಂದು ಕಂದಾಯ ಅಧಿಕಾರಿ ರವರು ಸಭೆಯ ಗಮನಕ್ಕೆ ತಂದರು.
8. Metro Line ರಸ್ತೆ, Chord ರಸ್ತೆ ಹಾಗೂ ವಿಜಯನಗರ ಅಡ್ಡರಸ್ತೆಗಳಲ್ಲಿ ಗಿಡ, ಮರಗಳನ್ನು ಹಾಗೂ ಮರದ ದಿಮ್ಮಿಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆಗೆ ದೂರವಾಣಿ ಮುಖೇನ ತಿಳಿಸಲು ಕಾರ್ಯದರ್ಶಿ ರವರಿಗೆ ಸೂಚಿಸಿದರು.
9. ಚೋಳೂರುಪಾಳ್ಯ, ಮಂಜುನಾಥನಗರ ಚಾನಲ್ ರಸ್ತೆ ಬಳಿ ಬಹಳಷ್ಟು ವಾಹನಗಳು ನಿಲುಗಡೆಯಾಗಿದ್ದು ಅದನ್ನು ತೆರವುಗೊಳಿಸಲು ಕೋರಿ Traffic Police ಇಲಾಖೆ ರವರಿಗೆ ಪತ್ರದ ಮೂಲಕ ತಿಳಿಸಲು ಕಾರ್ಯದರ್ಶಿ ರವರಿಗೆ ಸೂಚಿಸಿದರು.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸುವುದಾಗಿ ಕಾರ್ಯದರ್ಶಿ ಯವರು ತಿಳಿಸಿದರು. ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

R Sangule
ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 123 ವಿಜಯನಗರ.

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು.